3) ಸಿ ದರ್ಜೆ - 106

4) ಡಿ ದರ್ಜೆ - 86

ಇ) ಖಾಲಿ ಇರುವ 'ಎ' ಮತ್ತು 'ಬಿ' ವರ್ಗದ ಹುದ್ದೆಗಳನ್ನು ತುಂಬುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ.

ಸಕ್ರಮಗೊಳಿಸಲಾದ ದಿನಗೂಲಿ ನೌಕರರನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆದೇಶದಂತೆ ಬೇರೆ ಇಲಾಖೆಗಳಿಂದ ಪಡೆದು 'ಸಿ' ಮತ್ತು 'ಡಿ' ವರ್ಗದ ಹುದ್ದೆಗಳಿಗೆ ನೇಮಿಸಲಾಗುತ್ತಿದೆ.

**ಮೇವು ನಿಧಿ ಯೋಜನೆಯ ಅನುಷ್ಠಾನ**

23261 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ರಾಜ್ಯದ ಪಶುಸಂಗೋಪನಾ ಇಲಾಖೆಯಲ್ಲಿ ಮೇವು ನಿಧಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆಯೇ?*

*ಆ) ಹಾಗಿದ್ದಲ್ಲಿ ಯಾವ ಯಾವ ಜಾಗಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ?*

*ಇ) ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಲ್ಲವೇ?*

*ಈ) ಹಾಗಿದ್ದಲ್ಲಿ ಈ ಯೋಜನೆಯಡಿಯಲ್ಲಿ ಸಂಗ್ರಹಿಸಿದ ಮೇವು ಎಷ್ಟು ಹಾಗೂ ಕೇಂದ್ರದಿಂದ 1995-96ರಲ್ಲಿ ಬಂದ ಹಣದ ಸಹಾಯವೆಷ್ಟು?*

*ಉ) ಈ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಗುವುದೇ?*

ಶ್ರೀ ಬಿ.ಬಿ. ಲಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಹೌದು

ಆ) ಕೆಳಕಂಡ ಜಾನುವಾರು ಕ್ಷೇತ್ರಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

1) ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ

2) ತೇಗೂರು, ಧಾರವಾಡ ಜಿಲ್ಲೆ

3) ಬೀರೂರು, ಚಿಕ್ಕಮಗಳೂರು ಜಿಲ್ಲೆ

4) ಕುರೀಕುಪ್ಪಿ, ಬಳ್ಳಾರಿ ಜಿಲ್ಲೆ

ಇ) ಹೌದು

ಈ) ಪ್ರತಿ ಕೇಂದ್ರದಲ್ಲೂ 200 ಟನ್ ಮೇವು ಸಂಗ್ರಹಿಸಲಾಗಿದೆ.

1995-96ರಲ್ಲಿ ಕೇಂದ್ರದಿಂದ ರೂ. 15.00 ಲಕ್ಷ ಹಣದ ಸಹಾಯ ದೊರಕಿರುತ್ತದೆ.

ಉ) ಹೌದು

**ರಾಜ್ಯದಲ್ಲಿರುವ ಸರ್ಕಾರಿ ಮ್ಯೂಸಿಯಂಗಳ ದುರಸ್ತಿ**

1842 - ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

*ಅ) ರಾಜ್ಯದಲ್ಲಿರುವ ಸರ್ಕಾರಿ ಮ್ಯೂಸಿಯಂಗಳ ಸಂಖ್ಯೆ ಎಷ್ಟು?*

ಅ) ಈ ಮ್ಯೂಸಿಯಂಗಳ ದುರಸ್ತಿಗಾಗಿ ಹಾಗೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು 1995-96 ಖರ್ಚು ಮಾಡಿದ ಹಣವೆಷ್ಟು?

ಇ) ಹಲವಾರು ಮ್ಯೂಸಿಯಂಗಳ ಕಟ್ಟಡಗಳು ಅಪಾಯದ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಕಟ್ಟಡಗಳು ದುರಸ್ಥಿಯಾಗದೇ ಇರುವುದರಿಂದ ಈ ಮ್ಯೂಸಿಯಂಗಳಲ್ಲಿರುವ ಅಮೂಲ್ಯ ವಸ್ತುಗಳು ಹಾಳಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಉ) 1996-97ರಲ್ಲಿ ಈ ಎಲ್ಲಾ ಮ್ಯೂಸಿಯಂಗಳಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಹಾಗೂ ದುರಸ್ತಿ ಖರ್ಚು ಮಾಡಲಿರುವ ಹಣವೆಷ್ಟು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಒಟ್ಟು ಹತ್ತು ಸಂಗ್ರಹಾಲಯಗಳು ಹಾಗೂ ಒಂದು ಕಲಾಶಾಲೆ ಇದೆ.

ಆ) ರೂ. 30.00 ಲಕ್ಷ

ಇ) ಇಲ್ಲ

ಈ) ಇಂಥಹ ಪ್ರಕರಣಗಳು ಯಾವುದೂ ಉದ್ಭವವಾಗಿರುವುದಿಲ್ಲ.

ಉ) ರೂ. 30.00 ಲಕ್ಷ

**ಆರ್.ಎ.ಡಿ.ಗಳಲ್ಲಿ ವೈದ್ಯರು ಮತ್ತು ಔಷಧಿಗಳ ಕೊರತೆ**

1029 - ಶ್ರೀ ರವಿಕಾಂತ ಎನ್. ಪಾಟೀಲ್ : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ಮತ ಕ್ಷೇತ್ರದಲ್ಲಿ ಇರುವ ಆರ್.ಎ.ಡಿ.ಗಳು ಎಷ್ಟು?

ಆ) ಮೇಲ್ಕಂಡ ಆರ್.ಎ.ಡಿ.ಗಳಲ್ಲಿ ವೈದ್ಯರು ಮತ್ತು ಔಷಧಿಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 16

ಆ) ಹೌದು

ಇ) ಔಷಧಿಗಳಿಗೆ ಪ್ರತಿ ವರ್ಷ ಹೆಚ್ಚಿನ ಮೊತ್ತ ನಿಗಧಿಪಡಿಸಲಾಗುತ್ತಿದೆ. ಖಾಲಿ ಇರುವ ಕೆಲವು ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

**ಇಂಡಿ ಮತಕ್ಷೇತ್ರಕ್ಕೆ ಆರ್.ಎ.ಡಿ. ಮಂಜೂರಾತಿ**

1028 - ಶ್ರೀ ರವಿಕಾಂತ ಎನ್. ಪಾಟೀಲ್ (ಇಂಡಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ಮತ ಕ್ಷೇತ್ರದಲ್ಲಿ ಎರಡು ತಾಲ್ಲೂಕುಗಳು ಸೇರಿರುವುದರಿಂದ ಮುಂದಿನ ಆಯವ್ಯಯದಲ್ಲಿ ಮೂರು ಆರ್.ಎ.ಡಿ. ಮಂಜೂರಾತಿ ಮಾಡಲು ಉದ್ದೇಶಿಸಲಾಗಿದೆಯೇ?